# ಕುಡಿತ ಮತ್ತು ಅಪಘಾತ

1998ರ ಮೋಟಾರು ವಾಹನಗಳ ಕಾಯ್ದೆಯಲ್ಲೇ ಕುಡಿದು ವಾಹನ ಓಡಿಸುವ ಸವಾರರರನ್ನು ಜೈಲಿಗೆ ಕಳಿಸಲು ಅವಕಾಶವಿದೆ. ಆದರೆ ಈವರೆಗೆ ಅದನ್ನು ಯಾರೂ ಕಟ್ಟುನಿಟ್ಟಾಗಿ ಜಾರಿಗೆ ತಂದಿಲ್ಲ.

ಹೆಚ್ಚುತ್ತಿರುವ ರಸ್ತೆ ಅಪಘಾತಗಳ ಹಿನ್ನೆಲೆಯಲ್ಲಿ ಕೊನೆಗೂ ಎಚ್ಚತ್ತುಕೊಂಡಿರುವ ಕೇಂದ್ರ ಸರಕಾರ, ರಸ್ತೆ ಸಂಚಾರ ನಿಯಮಗಳ ಕಟ್ಟುನಿಟ್ಟಿನ ಜಾರಿಗೆ ಮುಂದಾಗಿರುವುದು ಸ್ವಾಗತಾರ್ಹ. ಬಹುತೇಕ ರಸ್ತೆ ಅಪಘಾತಗಳಿಗೆ ಚಾಲಕ ಶರಾಬು ಅಥವಾ ಮದ್ಯ ಕುಡಿದು ವಾಹನ ಚಲಾಯಿಸುವುದೇ ಕಾರಣ ಎನ್ನುವುದು ಅಂಕಿ ಅಂಶಗಳಿಂದ ಸಾಬೀತಾಗಿದೆ. ಹೀಗಾಗಿಯೇ ಇನ್ನು ಮುಂದೆ ಕುಡಿದು ವಾಹನ ಚಲಾಯಿಸುವವರಿಗೆ ದಂಡ ವಿಧಿಸುವುದೂ ಅಲ್ಲದೆ, ಜೈಲಿಗೆ ಕಳುಹಿಸುವುದನ್ನೂ ಕಟ್ಟುನಿಟ್ಟಾಗಿ ಜಾರಿಗೆ ತರಲು ಸರಕಾರ ಉದ್ದೇಶಿಸಿದೆ. ಕೇಂದ್ರ ರಸ್ತೆ ಸಾರಿಗೆ ಸಚಿವ ಸಿ.ಪಿ.ಜೋಶಿಯವರ ನೇತೃತ್ವದ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಂಡಳಿಯು ನೇಮಿಸಿದ್ದ ತಜ್ಞರ ತಂಡವು ಈ ನಿಟ್ಟಿನಲ್ಲಿ ವರದಿಯೊಂದನ್ನು ಈಗಾಗಲೆ ಸಲ್ಲಿಸಿದೆ. ಆ ವರದಿ ಈಗ ಸರಕಾರದ ಪರಿಶೀಲನೆಯಲ್ಲಿದ್ದು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆಯನ್ನು ಮಂಡಿಸುವುದು ಖಚಿತವಾಗಿದೆ.

ಹಾಗೆ ನೋಡಿದರೆ, ಈಗ ಇರುವ 1998ರ ಮೋಟಾರು ವಾಹನಗಳ ಕಾಯ್ದೆಯಲ್ಲೇ ಕುಡಿದು ವಾಹನ ಓಡಿಸುವ ಸವಾರರರನ್ನು ಜೈಲಿಗೆ ಕಳಿಸಲು ಅವಕಾಶವಿದೆ. ಕಾಯ್ದೆಯ ಸೆಕ್ಷನ್ 185ರ ಪ್ರಕಾರ, ಮದ್ಯಪಾನ ಮಾಡಿ ವಾಹನ ಚಲಾಯಿಸಿದಾತ ಮೊದಲ ಬಾರಿ ಸಿಕ್ಕಿಬಿದ್ದರೆ 2 ಸಾವಿರ ರೂಪಾಯಿ ದಂಡ ಅಥವಾ ಆರು ತಿಂಗಳು ಜೈಲು ಶಿಕ್ಷೆ ಅಥವಾ ಎರಡೂ ಶಿಕ್ಷೆಗಳನ್ನು ವಿಧಿಸಬಹುದು. ಎರಡನೆ ಬಾರಿ ಸಿಕ್ಕಿಬಿದ್ದರೆ ದುಪ್ಪಟ್ಟು ದಂಡ ಅಲ್ಲದೆ ಚಾಲನಾ ಪರವಾನಗಿಯನ್ನೇ ರದ್ದುಗೊಳಿಸುವ ಕ್ರಮಗಳಿಗೂ ಅವಕಾಶವಿದೆ. ಆದರೆ ಯಾವ ರಾಜ್ಯ ಸರಕಾರಗಳೂ ಈ ಕಾನೂನನ್ನು ಇದುವರೆಗೆ  ಕಟ್ಟುನಿಟ್ಟಾಗಿ ಜಾರಿಗೆ ತಂದಿಲ್ಲ. ದಂಡವನ್ನು ಸ್ಥಳದಲ್ಲೇ ವಸೂಲಿ ಮಾಡುವುದು ಅಥವಾ ಕೋರ್ಟಿನಲ್ಲಿ ವಸೂಲಿ ಮಾಡುವುದಷ್ಟೇ ಈಗ ಪೊಲೀಸರು ಮಾಡುತ್ತಿರುವ ಕೆಲಸ. ಅಪ್ರಾಮಾಣಿಕ ಪೊಲೀಸ್ ಪಡೆ ಇರುವಲ್ಲಿ ಕುಡುಕ ಸವಾರರನ್ನು ಲಂಚ ಪಡೆದು ಬಿಟ್ಟುಬಿಡುವುದೂ ಸಹಜವೆಂಬಂತೆ ನಡೆದಿದೆ.

‘ಕಳೆದ ವರ್ಷ ದೇಶದಲ್ಲಿ ನಾಲ್ಕೂವರೆ ಲಕ್ಷ ಅಪಘಾತಗಳು ಸಂಭವಿಸಿದ್ದು, 1.3 ಲಕ್ಷ ಜನರು ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ; ಐದು ಲಕ್ಷ ಜನ ಗಾಯಗೊಂಡಿದ್ದಾರೆ’ ಎಂದು ಅಂಕಿ ಅಂಶಗಳು ಹೇಳುತ್ತವೆ. ಈ ಅಪಘಾತಗಳಲ್ಲಿ ಸುಮಾರು ಮೂರೂವರೆ ಲಕ್ಷದಷ್ಟು ಅಪಘಾತಗಳು ಕುಡಿದು ವಾಹನ ಚಲಾಯಿಸಿದ್ದರಿಂದಲೇ ಆಗಿವೆ! ಇದು ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ. ನಮ್ಮ ಸಮಾಜದಲ್ಲಿ ಮೊದಲೇ ‘ನಾಗರಿಕ ಪ್ರಜ್ಞೆ’ ತೀರಾ ಕನಿಷ್ಠಮಟ್ಟದಲ್ಲಿ ಇರುವುದರಿಂದ ನಿಯಮಗಳ ಉಲ್ಲಂಘನೆಯನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ. ರಸ್ತೆಯಲ್ಲಿ ಕಸ ಹಾಕುವುದಾಗಲೀ, ಉಗುಳುವುದಾಗಲೀ, ರಸ್ತೆಬದಿಯಲ್ಲಿ ಕಸಕಡ್ಡಿಗಳ ರಾಶಿ ಮಾಡುವುದಾಗಲೀ ‘ತಪ್ಪು’ ಎಂದು ನಮ್ಮಲ್ಲಿ ಯಾರೂ ಪರಿಗಣಿಸುವುದಿಲ್ಲ. ಅದಕ್ಕಿಂತ ದೊಡ್ಡ ಅಪರಾಧ ಕುಡಿದು ಚಾಲನೆ ಮಾಡುವುದು. ಯಾಕೆಂದರೆ ಚಾಲಕನ ಈ ತಪ್ಪಿನಿಂದ ವಾಹನದಲ್ಲಿ, ರಸ್ತೆಯಲ್ಲಿ ಸಂಚರಿಸುವವರ ಪ್ರಾಣಗಳಿಗೇ ಅಪಾಯವಿದೆ. ‘ದಂಡ ಕಟ್ಟಿದರೆ ಏನು ಮಾಡಿದರೂ ನಡೆಯುತ್ತದೆ’ ಎನ್ನುವ ಧೋರಣೆ ನಮ್ಮ ಬಹುತೇಕ ವಾಹನ ಚಾಲಕರಲ್ಲಿ ಬಂದುಬಿಟ್ಟಿದೆ.

ದೆಹಲಿಯಲ್ಲಿ ಇತ್ತೀಚೆಗೆ ಕುಡಿದು ವಾಹನ ಚಲಾಯಿಸುವವರನ್ನು ನಾಲ್ಕೈದು ದಿನಗಳ ಮಟ್ಟಿಗಾದರೂ ಜೈಲಿಗೆ ಹಾಕುವ ಕೆಲಸವನ್ನು ಅಲ್ಲಿನ ಪೊಲೀಸರು ಕಟ್ಟುನಿಟ್ಟಾಗಿ ಮಾಡುತ್ತಿದ್ದಾರೆ. ಇದರಿಂದ ಅಪಘಾತಗಳ ಪ್ರಮಾಣ ಸಾಕಷ್ಟು ಕಡಿಮೆಯಾಗಿದೆ ಎಂದು ಅಲ್ಲಿನ ಪೊಲೀಸ್ ಮುಖ್ಯಸ್ಥರೇ ತಿಳಿಸಿದ್ದಾರೆ. ಕೇಂದ್ರದ ಕಾಯ್ದೆ ತಿದ್ದುಪಡಿಗೂ ಕಾಯದೆ ಇತರ ರಾಜ್ಯಗಳೂ ದೆಹಲಿ ಮಾದರಿಯನ್ನು ಅನುಸರಿಸಬಹುದು. ಕರ್ನಾಟಕದಲ್ಲಂತೂ ಭಾರೀ ಪ್ರಾಣಹಾನಿಯ ವಾಹನ ಅಪಘಾತಗಳು ಸಾಕಷ್ಟು ಸಂಖ್ಯೆಯಲ್ಲಿ ನಡೆಯುತ್ತಿವೆ. ಆಗಾಗ್ಗೆ ಪತ್ರಿಕೆಗಳಲ್ಲಿ ವರದಿಗಳೂ ಬರುತ್ತವೆ. ಒಂದು ಅಪಘಾತವಾದ ಬಳಿಕ ಮೋಟಾರು ವಾಹನ ಕಾಯ್ದೆಯ ಕಠಿಣ ಜಾರಿಯ ಬಗ್ಗೆ  ಅಧಿಕಾರಿಗಳು ಗಟ್ಟಿಯಾಗಿ ಮಾತನಾಡುತ್ತಾರೆ. ಬಳಿಕ ಎಲ್ಲವೂ ಮರೆತು ಹೋಗುತ್ತದೆ.

ಕುಡಿದು ವಾಹನ ಚಲಾಯಿಸುವವರನ್ನು ಪತ್ತೆ ಮಾಡುವ ‘ನಾಗರಿಕ ವಿಧಾನ’ಗಳೂ ನಮ್ಮಲ್ಲಿ ಅಷ್ಟಾಗಿ ಬಳಕೆಯಲ್ಲಿಲ್ಲ. ಪೊಲೀಸ್ ವ್ಯವಸ್ಥೆ ಹೆಚ್ಚು ಬಲವಾಗಿರುವ ಮಹಾನಗರದಲ್ಲೂ ರಾತ್ರಿ ವೇಳೆ ಕುಡಿದು ವಾಹನ ಚಲಾಯಿಸುವವರನ್ನು ಪತ್ತೆ ಮಾಡಲು ಪೊಲೀಸರು ‘ಬಾಯಿ ಆ.. ಮಾಡಿ’ ಎಂದು ಮೂಸುವುದು ಈಗಲೂ ನಡೆದಿದೆ! ಅದಕ್ಕಾಗಿಯೇ ಇರುವ ಯಂತ್ರ ಪೊಲೀಸರ ಬಳಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲವಂತೆ. ಪೊಲೀಸರೇ ಅಡ್ಡಾದಿಡ್ಡಿಯಾಗಿ ಅಥವಾ ಫುಟ್‌ಪಾತ್ ಮೇಲೆ ವಾಹನ ಪಾರ್ಕಿಂಗ್ ಮಾಡುವುದು ಮತ್ತು ಚಲಾಯಿಸುವುದೂ ಇಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತದೆ! ಕಾನೂನನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ ಬಗ್ಗೆ ಮಾತನಾಡುವ ಅಧಿಕಾರಿಗಳು ಇಲಾಖೆಯನ್ನು ತಳಮಟ್ಟದಿಂದ ಅದಕ್ಕೆ ಸಜ್ಜುಗೊಳಿಸುವುದೂ ಮೊದಲು ಆಗಬೇಕಾದ ಕೆಲಸ.

■ ಬಿ.ಎಂ.ಹನೀಫ್

